ಸಾಕ್ಷಿಯನ್ನು ದಿಃ**04.12.2024** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಎನ್.ಎ. ವಕೀಲರಿಂದ:

ನಿಡಿ.10 ರಿಂದ 12 ರಲ್ಲಿ ಚೆಕ್ಕು ಬಂದಿ ನಮೂದು ಆಗಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಫಾರ್ಮ್‌ನಂ.11 ನಲ್ಲಿ ಚೆಕ್ಕು ಬಂದಿಯನ್ನು ನಮೂದಿಸಿ ಪಂಚಾಯಿತಿಯವರು ದಾಖಲೆ ನಿರ್ವಹಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಫಾರ್ಮ್‌ನಂ.11 ನ್ನು ಪಡೆಯಲು ನಾನು ಅರ್ಜಿ ಸಲ್ಲಿಸಿರುವುದಿಲ್ಲ. ನಾನು ಉದ್ದೇಶಪೂರ್ವಕವಾಗಿ ಫಾರ್ಮ್‌ನಂ.11 ನ್ನು ಹಾಜರುಪಡಿಸಿದರೇ ಚೆಕ್ಕು ಬಂದಿ ಗೊತ್ತಾಗುತ್ತದೆ ಎಂದು ಅದನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಸ್ವಾಧೀನಾನುಭವದಲ್ಲಿರುವ ನಮ್ಮ ಆಸ್ತಿಯ ಚೆಕ್ಕು ಬಂದಿ ಪೂರ್ವಕ್ಕೆಃ ನಮ್ಮ ಸ್ವತ್ತು, ಪಶ್ಚಿಮಕ್ಕೆಃ ಮರಿಯಪ್ಪನವರ ಪಾಳು ಜಾಗ, ಉತ್ತರಕ್ಕೆಃ ಪ್ರಭಾಕರರವರ ಮನೆ ಮತ್ತು ದಕ್ಷಿಣಕ್ಕೆಃ ಜವರೇಗೌಡರ ಸ್ವತ್ತು.

ಪ್ರತಿವಾದ ಪತ್ರದ ಸ್ವತ್ತಿನ ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ಪ್ರತಿವಾದ ಪತ್ರದ ಸ್ವತ್ತಿನ ಚೆಕ್ಕು ಬಂದಿಯನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿಯು ಸದರಿ ಚೆಕ್ಕು ಬಂದಿ ಸರಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಈ ಮೇಲೆ ಹೇಳಿದಂತೆ ಪೂರ್ವಕ್ಕೆ ನಮ್ಮದೇ ಜಮೀನು ಇದ್ದು, ನಮ್ಮ ಆಸ್ತಿಯ ನಂತರ ಸಾಕಮ್ಮನವರ ಜಮೀನು ಇರುತ್ತದೆ. ಸದರಿ ಪೂರ್ವಕ್ಕಿರುವ ನಮ್ಮ ಜಮೀನು ನಮ್ಮ ತಾತ, ಮುತ್ತಾತನ ಕಾಲದಿಂದಲೂ ಇದೆ.

ಪ್ರತಿವಾದ ಪತ್ರದಲ್ಲಿ ಪೂರ್ವಕ್ಕೆ ಸಾಕಮ್ಮನವರ ಜಮೀನು ಎಂದು ತೋರಿಸಿರುವುದು ನನ್ನ ಪ್ರಕಾರ ಸರಿ ಇದೆ.

ನಿಡಿ.2 ಆಗುವ ಪೂರ್ವದಲ್ಲಿ ಪ್ರತಿವಾದಿಯ ಆಸ್ತಿಯ ಪೂರ್ವಕ್ಕೆ ನಮ್ಮದೇ ಜಮೀನು ಇದೆ ಎಂದರೆ ಸಾಕ್ಷಿಯು ತಮ್ಮ ಮನೆಯ ಜಾಗ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮನೆಯ ಜಾಗದ ನಂತರ ಸಾಕಮ್ಮನವರ ಜಮೀನು ಇದೆ. ನಿಡಿ.2 ರಲ್ಲಿ ಪೂರ್ವಕ್ಕೆ ಚಿಕ್ಕನರಸೇಗೌಡರ ಪಾಳು ಜಾಗ ಎಂದು ತೋರಿಸಿದೆ ಎಂದರೆ ಸಾಕ್ಷಿಯು ಅವರು ತನ್ನ ತಾತನ ಅಳಿಯನಾಗಿದ್ದು, ಅವರ ವಾಸಕ್ಕೆ ಬಿಟ್ಟುಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿಯವರಿಗೆ ಬಾಯಿ ಮಾತಿನ ಆಧಾರದ ಮೇಲೆ ಬಿಟ್ಟುಕೊಡಲಾಗಿದೆ. ದಾವಾ ಆಸ್ತಿಗೂ, ಪ್ರತಿವಾದ ಪತ್ರದ ಆಸ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ವಾದಿಗೆ ದಾವಾ ಆಸ್ತಿಯ ಚೆಕ್ಕು ಬಂದಿಯನ್ನು ಓದಿ ಹೇಳಿ, ಸದರಿ ಆಸ್ತಿಯನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ಉತ್ತರದ ಕಡೆಗೆ ಗೋವಿಂದಯ್ಯನವರು ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ದಾವಾ ಆಸ್ತಿಗೆ ಪೂರ್ವಕ್ಕೆಃ ಸಾಕಮ್ಮನವರ ಜಮೀನು, ಪಶ್ಚಿಮಕ್ಕೆಃ ಚಿಕ್ಕಲಕ್ಕೇಗೌಡರ ಮಗ ಎಲ್.ಎಂ.ರಾಮಣ್ಣ, ಉತ್ತರಕ್ಕೆಃ ಪ್ರಭಾಕರರವರ ಮನೆ ಮತ್ತು ದಕ್ಷಿಣಕ್ಕೆಃ ವಾದಿಯ ತಂದೆ ಜವರೇಗೌಡರ ಜಮೀನು. ಉತ್ತರಕ್ಕೆ ಗೋವಿಂದರಾಜುರವರ ಜಮೀನು ಇದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯವನ್ನು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯ ಕುಟುಂಬವೇ ಸ್ವಾಧೀನಾನುಭವದಲ್ಲಿದ್ದರೂ ಇಲ್ಲ ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನನಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಆಸ್ತಿಗೂ ನಾನು ಹಾಜರುಪಡಿಸಿದ ದಾಖಲೆಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮೊದಲಿಂದಲೂ ಇಲ್ಲಿಯವರೆಗೂ ಸಹ ದಾವಾ ಆಸ್ತಿಗೆ ಪಂಚಾಯಿತಿಯಲ್ಲಿ ಖಾತೆ ದಾಖಲೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ .
ಕುಣಿಗಲ್.